# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 136 (158) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸಬೇಕಾದ ದಿನಾಂಕ | : | 14.02.2023 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಯಾವ ರೀತಿಯಲ್ಲಿ ಮಾಡಲಾಗುತ್ತಿದೆ; (ಪಾಲಿಕೆವಾರು ವಿವರ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಕೈಗೊಂಡಿರುವ ಕ್ರಮಗಳ ಪಾಲಿಕೆವಾರು ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಗುತ್ತಿಗೆಗೆ ನೀಡಲಾಗಿದೆಯೇ? ಅಥವಾ ಪಾಲಿಕೆಯ ನೌಕರರಿಂದ ನಿರ್ವಹಿಸಲಾಗುತ್ತಿದೆಯೇ? ಗುತ್ತಿಗೆ ನೀಡಿದ್ದಲ್ಲಿ ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ? (ವಿವರ ನೀಡುವುದು). | ಹೌದು.<br><br>ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ತ್ಯಾಜ್ಯ ವಿಲೇವಾರಿಗಾಗಿ ಹಾಲಿ ಗುತ್ತಿಗೆದಾರರಾದ ಮೆ\|\| ಆಂಟೋನಿ ವೇಸ್ಟ್ ಹ್ಯಾಂಡ್‌ಲಿಂಗ್ಸ್ ಪ್ರೈ. ಲಿಮಿಟೆಡ್, ಮುಂಬೈ ಇವರಿಗೆ ವಹಿಸಲಾಗಿದ್ದು, ಗುತ್ತಿಗೆ ಅವಧಿಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 3 ಎಂಎಂಸಿ 2022(ಇ), ದಿನಾಂಕ: 24.02.2022 ರನ್ವಯ ಪೌರಕಾರ್ಮಿಕರ ನೇಮಕಾತಿ ಪೂರ್ಣಗೊಳಿಸುವವರೆಗೆ ಹಾಗೂ ಘನತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ವಾಹನಗಳು - ಯಂತ್ರೋಪಕರಣಗಳನ್ನು ಖರೀದಿಸುವ ಕಾರ್ಯವನ್ನು ಅಂತಿಮಗೊಳಿಸುವವರೆಗೆ ಅಥವಾ ದಿನಾಂಕ 01.02.2022 ರಿಂದ ಒಂದು ವರ್ಷದ ಅವಧಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲಾಗಿದೆ. |
| ಇ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪಚ್ಚನಾಡಿಯಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕದ ತ್ಯಾಜ್ಯ ನೀರು ಬಹುಗ್ರಾಮ ಯೋಜನೆಯ ಮಳವೂರು ಕುಡಿಯುವ ನೀರಿನ ಅಣೆಕಟ್ಟೆಗೆ ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಪಚ್ಚನಾಡಿ ಘನತ್ಯಾಜ್ಯ ಕಾಂಪೋಸ್ಟ್ ಘಟಕದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು (ಲಿಚೇಟ್) 50 ಕೆ.ಎಲ್.ಡಿ ಸಾಮರ್ಥ್ಯದಲ್ಲಿ ಲಿಚೇಟ್ ಶುದ್ಧೀಕರಣ ಘಟಕದ ಮುಖಾಂತರ ಸಂಸ್ಕರಿಸಲಾಗುತ್ತಿದೆ.<br><br>ಪಚ್ಚನಾಡಿ ಘನತ್ಯಾಜ್ಯ ವಿಲೇವಾರಿ (ನೆಲಭರ್ತಿ) ಘಟಕದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು (ಲಿಚೇಟ್) ಈಗಾಗಲೇ ನಿರ್ಮಿಸಲಾಗಿರುವ 1 ಲಕ್ಷ ಕೆ.ಎಲ್.ಡಿ ಸಾಮರ್ಥ್ಯದ ಸಂಗ್ರಹಣಾ ಟ್ಯಾಂಕ್ ನಲ್ಲಿ ಸಂಗ್ರಹಿಸಿ ಪಚ್ಚನಾಡಿಯ ಲಿಚೇಟ್ ಶುದ್ಧೀಕರಣ ಘಟಕದಲ್ಲಿ ಹಾಗೂ ಪಾಲಿಕೆಯ ಎಸ್.ಟಿ.ಪಿ. ಘಟಕದಲ್ಲಿ ಸಂಸ್ಕರಿಸಲಾಗುತ್ತಿದೆ.<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಚ್ಚನಾಡಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯ (Legacy Waste) ನಿರ್ವಹಣೆಗೆ ಸಂಬಂಧಪಟ್ಟಂತೆ M/s National Federation of Farmers procurement Processing & Retailing Co-operatives of India Ltd. (NACOF), Hyderabad ಸಂಸ್ಥೆಯೊಂದಿಗಿನ ದಿನಾಂಕ 22.04.2022 ರ ಕರಾರು ಒಪ್ಪಂದಂತೆ, ಸದರಿ ಸಂಸ್ಥೆಯ ವತಿಯಿಂದ ಈಗಾಗಲೇ ಪಚ್ಚನಾಡಿ ಘನತ್ಯಾಜ್ಯ |

| | | |
|---|---|---|
| | | ವಿಲೇವಾರಿ ಘಟಕದ ಕೆಳ ಪ್ರದೇಶದಲ್ಲಿ 20 ಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು (ಲಿಚೇಟ್) ಸಂಗ್ರಹಣ ಕೊಳವನ್ನು ಸ್ಥಾಪಿಸಲಾಗಿರುತ್ತದೆ. ಸದರಿ ತ್ಯಾಜ್ಯ ನೀರು ಸಂಸ್ಕರಣಾ ಕೊಳದಲ್ಲಿ ಇ.ಒ. (Effective Microbial) Culture (ಜೈವಿಕದ್ರಾವಣ) ವನ್ನು ಸಿಂಪಡಿಸಿ Biological Treatment ಮುಖಾಂತರ ಸಂಸ್ಕರಣೆ ಮಾಡಲಾಗುತ್ತಿದೆ. ಸದರಿ ಪ್ರದೇಶದಿಂದ ಯಾವುದೇ ತ್ಯಾಜ್ಯ / ಕಲುಷಿತ ನೀರು, ಸಂಸ್ಕರಣೆಯಾಗದೇ ಹೊರ ಹೋಗದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಈ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಪಚ್ಚನಾಡಿಯಲ್ಲಿರುವ ಘನತ್ಯಾಜ್ಯ ನಿರ್ವಹಣಾ ಘಟಕ ಸಮರ್ಪಕವಾಗಿ ಮತ್ತು ವೈಜ್ಞಾನಿಕವಾಗಿ ಕಾರ್ಯ ನಿರ್ವಹಿಸದ ಕಾರಣ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಯಾವುದೇ ಘನತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲು ಸಾರ್ವಜನಿಕ ವಿರೋಧ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೇ? ಈ ಕುರಿತು ಸಮರೋಪಾದಿಯಲ್ಲಿ ಸದರಿ ಘನತ್ಯಾಜ್ಯ ನಿರ್ವಹಣೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪಚ್ಚನಾಡಿಯಲ್ಲಿರುವ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಸಮರ್ಪಕವಾಗಿ ಮತ್ತು ವೈಜ್ಞಾನಿಕವಾಗಿ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಮಾಡಲಾಗುತ್ತಿದೆ.<br><br>ಆದಾಗ್ಯೂ ಜಿಲ್ಲೆಯ ಸೋಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ, ಬಜಪೆ ಕೋಟೆಕಾರು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿ ನಿವೇಶನಗಳನ್ನು ಅಭಿವೃದ್ಧಿಪಡಿಸಲು ಸ್ಥಳೀಯರು ವಿರೋಧ ವ್ಯಕ್ತಪಡಿಸಿರುತ್ತಾರೆ.<br><br>ಘನತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಪಾತ್ರವನ್ನು ತಿಳಿಸಿ, ಅರಿವು ಮೂಡಿಸಲು ಹೆಚ್ಚಿನ ಒತ್ತು ನೀಡಿ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ವಿವಿಧ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಸ್ವಚ್ಛ ಭಾರತ ಮಿಷನ್ 2.0 ಅಡಿ ಐ.ಇ.ಸಿ. ಚಟುವಟಿಕೆಗಳ ಕ್ರಿಯಾಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ.<br><br>ಹಾಗೆಯೇ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಪ್ರತಿನಿಧಿಗಳು, ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಅಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಪೌರಕಾರ್ಮಿಕರು, ಸ್ವಚ್ಛತಾ ಕೆಲಸಗಾರರ ಸಾಮರ್ಥ್ಯ ಅಭಿವೃದ್ಧಿಗಾಗಿ ರಾಜ್ಯ ಹಾಗೂ ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. |
| ಉ) | ಕರ್ನಾಟಕ ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು). | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ತ್ಯಾಜ್ಯ ಉತ್ಪಾದನೆ ಹಾಗೂ ಸಂಸ್ಕರಣೆಯ ಪ್ರಸ್ತುತ ಸ್ಥಿತಿಯನ್ನು ವಿಶ್ಲೇಷಿಸಿ, ಕೊರತೆಯಿರುವ ಅಂಶಗಳನ್ನು ಗುರುತಿಸಲಾಗಿದ್ದು, ತ್ಯಾಜ್ಯ ವಸ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಣೆ ಮಾಡಲು ಅಗತ್ಯವಿರುವ ಒಣ ತ್ಯಾಜ್ಯ ನಿರ್ವಹಣಾ ಘಟಕ (10 ನಗರಗಳಲ್ಲಿ), ದ್ವಿತೀಯ ಹಂತದ ಸಾಗಣಿಕೆ ಘಟಕ (2 ನಗರಗಳಲ್ಲಿ), ನಿಸ್ಸತ್ವ ತ್ಯಾಜ್ಯ ವಿಲೇವಾರಿಗೆ ವೈಜ್ಞಾನಿಕ ನೆಲಭರ್ತಿ ಸೌಲಭ್ಯ (10 ನಗರಗಳಲ್ಲಿ), ಕಟ್ಟಡ ನಿರ್ಮಾಣ ತ್ಯಾಜ್ಯ ಸಂಸ್ಕರಣೆ ಘಟಕ (4 ನಗರಗಳಲ್ಲಿ) ಅಭಿವೃದ್ಧಿ ಪಡಿಸಲು, ಪಾರಂಪರಿಕ ತ್ಯಾಜ್ಯ ನಿರ್ವಹಣೆ (10 ನಗರಗಳಲ್ಲಿ), ಸ್ವಚ್ಛ ಭಾರತ ಮಿಷನ್ ಅಡಿ ಕ್ರಿಯಾಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಈ ಸೌಲಭ್ಯಗಳನ್ನು ಮಹಾನಗರ ಪಾಲಿಕೆಗಳಲ್ಲಿ ಅಭಿವೃದ್ಧಿಪಡಿಸಲು ಕೆಟಿಪಿಪಿ ನಿಯಮಗಳ ರೀತ್ಯಾ ಎಲ್ಲಾ ಅಗತ್ಯ ಕ್ರಮವಹಿಸಲಾಗುತ್ತಿದ್ದು, ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

ನಅಇ 16 ಎಂಎಂಸಿ 2023 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**

## ಅನುಬಂಧ-1

### 1. ತುಮಕೂರು ಮಹಾನಗರಪಾಲಿಕೆ

ತುಮಕೂರು ಮಹಾನಗರಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆಯು ನಿರಂತರವಾಗಿ ನಡೆಯುತ್ತಿರುತ್ತದೆ. ಪ್ರತಿನಿತ್ಯ ಸುಮಾರು 135-140 ಟನ್‌ಗಳ ಘನತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಘಟಕಕ್ಕೆ ಸಾಗಿಸಲಾಗುತ್ತಿದೆ. ಇದರಲ್ಲಿ 75-80 ಟನ್ ಹಸಿ ತ್ಯಾಜ್ಯದಿಂದ ವಿಂಡ್ರೋ, ವರ್ಮಿ ಮತ್ತು ಎರೆಹುಳು ಗೊಬ್ಬರವನ್ನು ತಯಾರಿಸಲಾಗುತ್ತಿದೆ ಹಾಗೂ 03 ಟನ್ ಮರುಬಳಕೆ ತ್ಯಾಜ್ಯವನ್ನು ಮರುಬಳಕೆದಾರರಿಗೆ ಮಾರಾಟ ಮಾಡಲಾಗುತ್ತಿದೆ ಹಾಗೂ ಉಳಿಕೆ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ಬೇಲ್ ಮಾಡಿ ಸಿಮೆಂಟ್ ಕಾರ್ಖಾನೆಗೆ ರವಾನಿಸಲಾಗುತ್ತಿದೆ.

### 2. ಮಂಗಳೂರು ಮಹಾನಗರಪಾಲಿಕೆ

1. ಮಂಗಳೂರು ಮಹಾನಗರಪಾಲಿಕೆಯಲ್ಲಿ 60 ವಾರ್ಡ್‌ಗಳಿದ್ದು, ಪ್ರತಿನಿತ್ಯ ಅಂದಾಜು 300-330 ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತದೆ.
2. ಪಾಲಿಕೆಯಲ್ಲಿರುವ 291 ಖಾಯಂ ಪೌರಕಾರ್ಮಿಕರಿಂದ, 13 ವಾರ್ಡ್‌ಗಳ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ ಹಾಗೂ ಉಳಿದ 47 ವಾರ್ಡ್‌ಗಳ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ಮುಖಾಂತರ ನಿರ್ವಹಿಸಲಾಗುತ್ತಿದೆ.
3. ಪ್ರಸ್ತುತ, ವಾರದಲ್ಲಿ ಶುಕ್ರವಾರವನ್ನು ಹೊರತುಪಡಿಸಿ ಬೇರೆ ಎಲ್ಲಾ ದಿನವೂ ಹಸಿ ತ್ಯಾಜ್ಯವನ್ನು ಸಂಗ್ರಹಿಸಲಾಗುವುದು ಹಾಗೂ ಶುಕ್ರವಾರದಂದು ಮಾತ್ರ ಒಣ ತ್ಯಾಜ್ಯವನ್ನು ಸಂಗ್ರಹಿಸಲಾಗುವುದು. ಸ್ಯಾನಿಟರಿ ತ್ಯಾಜ್ಯವನ್ನು ವಾರದ ಎಲ್ಲಾ ದಿನವೂ ಸಂಗ್ರಹಿಸಲಾಗುತ್ತದೆ.
4. ದಿನನಿತ್ಯ ಸಂಗ್ರಹವಾಗುವ ತ್ಯಾಜ್ಯವನ್ನು ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಚ್ಚನಾಡಿ ಘನತ್ಯಾಜ್ಯ ಸಂಸ್ಕರಣ ಮತ್ತು ವಿಲೇವಾರಿ ಘಟಕಕ್ಕೆ ಸಾಗಿಸಲಾಗುತ್ತದೆ.
5. ಹಸಿ ತ್ಯಾಜ್ಯವನ್ನು ವಿಂಡ್ರೋ ಕಾಂಪೋಸ್ಟಿಂಗ್ (ಪಾಲಿಕೆಯಿಂದಲೇ) ಮತ್ತು ಬ್ಲಾಕ್ ಸೋಲ್ಜರ್ (Block Soldier Fly) ಹುಳಗಳ ಮುಖಾಂತರ ಸಂಸ್ಕರಣೆ ಮಾಡಿ ಗೊಬ್ಬರ ತಯಾರಿಸಲಾಗುತ್ತಿದೆ. ಉತ್ಪತ್ತಿಯಾಗುವ ಗೊಬ್ಬರವನ್ನು ಸ್ವಂತ ಉಪಯೋಗಕ್ಕೆ ಹಾಗೂ ಅಗತ್ಯವಿರುವವರಿಗೆ ಮಾರಾಟ ಮಾಡಲಾಗುತ್ತಿದೆ.
6. ಎಳನೀರು ಅಥವಾ ತೆಂಗಿನ ತ್ಯಾಜ್ಯವನ್ನು ಪ್ರಾಯೋಗಿಕವಾಗಿ ಸಂಸ್ಕರಣೆ ಮಾಡಲಾಗುತ್ತಿದೆ.
7. ಹಾಗೆಯೇ ಶುಕ್ರವಾರಗಳಂದು ಸಂಗ್ರಹವಾಗುವ ಒಣತ್ಯಾಜ್ಯವನ್ನು ಸಂಸ್ಕರಣೆ ಮಾಡಿ ಅನುಪಯುಕ್ತ ಒಣ ತ್ಯಾಜ್ಯವನ್ನು ಬೇಲ್ ಮಾಡಲಾಗುತ್ತಿದೆ ಹಾಗೂ ಬೇಲ್ ಮಾಡಲಾಗಿರುವ ಅನುಪಯುಕ್ತ ಒಣ ತ್ಯಾಜ್ಯವನ್ನು () ಸಿಮೆಂಟ್ ಕಾರ್ಖಾನೆಗಳಿಗೆ ರವಾನಿಸಲು ಕ್ರಮವಹಿಸಲಾಗಿರುತ್ತದೆ.

### 3. ಮೈಸೂರು ಮಹಾನಗರಪಾಲಿಕೆ

ಮೈಸೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 502 ಮಂದಿ ಹಾಗೂ ನೇರ ಪಾವತಿಯಡಿಯಲ್ಲಿ ಒಟು 1528 ಮಂದಿ ಪೌರಕಾರ್ಮಿಕರುಗಳನ್ನೊಳಗೊಂಡು, ಘನತ್ಯಾಜ್ಯ ವ್ಯವಸ್ಥಾಪನಾ ನಿಯಮಗಳು-2016ರನ್ವಯ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗಳಲ್ಲಿ 325 ಆಟೋ ಟಿಪ್ಪರ್‌ಗಳಿಂದ ಮೂಲದಲ್ಲಿಯೇ ಬೇರ್ಪಡಿಸಿದ ಮನೆ-ಮನೆ ತ್ಯಾಜ್ಯ ಸಂಗ್ರಹಣೆ ಮಾಡುತ್ತಿದ್ದು, ಶೇ.100 ತ್ಯಾಜ್ಯ ವಿಂಗಡಣೆಯನ್ನು ಸಾಧಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ.

- ಪ್ರಾಥಮಿಕ ಹಂತದಲ್ಲಿ ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗಳಲ್ಲಿ ಮುಚ್ಚಿದ 325 ಆಟೋ ಟಿಪ್ಪರ್‌ಗಳಿಂದ ಮೂಲದಲ್ಲಿಯೇ ಬೇರ್ಪಡಿಸಿದ ಮನೆ-ಮನೆ ತ್ಯಾಜ್ಯ ಸಂಗ್ರಹಣೆ ಮಾಡಲಾಗುತ್ತಿರುತ್ತದೆ.

- ದ್ವಿತೀಯ ಹಂತದ ತ್ಯಾಜ್ಯ ಸಾಗಾಣಿಕೆಗಾಗಿ 21 ಸಂಖ್ಯೆಯಕ್ಲೋಸ್ಡ್ ಬಾಡಿ ಕಾಂಪ್ಯಾಕ್ಟರ್‌ಗಳನ್ನು ನಿಯೋಜಿಸಲಾಗಿರುತ್ತದೆ. 70 ಸಂಖ್ಯೆಯ ಹೈ-ರೈಸ್ಡ್‌ಕ್ಲೋಸ್ಡ್ ಬಾಡಿ ಟ್ರ್ಯಾಕ್ಟರ್ ಟ್ರೈಲರ್‌ಗಳನ್ನು ದ್ವಿತೀಯ ಹಂತದ ತ್ಯಾಜ್ಯ ಸಾಗಾಣಿಕೆಗಾಗಿ ನಿಯೋಜಿಸಲಾಗಿರುತ್ತದೆ.

**4. ದಾವಣಗೆರೆ ಮಹಾನಗರಪಾಲಿಕೆ**

ದಾವಣಗೆರೆ ಮಹಾನಗರಪಾಲಿಕೆಯಲ್ಲಿ ಪ್ರತಿನಿತ್ಯ 170 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ಪೈಕಿ 50 ಟನ್‌ನಷ್ಟು ತ್ಯಾಜ್ಯವನ್ನು ಕಾಂಪೋಸ್ಟಿಂಗ್ ಮೂಲಕ ಸಂಸ್ಕರಿಸಲಾಗುತ್ತಿದ್ದು, ಉಳಿದ ತ್ಯಾಜ್ಯವನ್ನು ನೆಲಭರ್ತಿ
ಜಾಗದಲ್ಲಿ ವಿಲೆ ಪಡಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 740 ಟನ್ ಆರ್‌ಡಿ.ಎಫ್ ತ್ಯಾಜ್ಯವನ್ನು ಸಿಮೆಂಟ್ ಕಾರ್ಖಾನೆಗೆ ಕಳುಹಿಸಿ ಕೊಪ್ರೋಸೆಸಿಂಗ್ ಮೂಲಕ ವಿಲೆಪಡಿಸಲಾಗಿದೆ.

**5. ಬೆಳಗಾವಿ ಮಹಾನಗರಪಾಲಿಕೆ**

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ 250 ರಿಂದ 260 ಟನ್ ಕಸ ಉತ್ಪತ್ತಿಯಾಗುತ್ತದೆ. ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಣೆಗಾಗಿ ಪೌರಕಾರ್ಮಿಕರಿಂದ ಕಾರ್ಯ ನಿರ್ವಹಿಸಲಾಗುತ್ತಿದೆ. ಬೆಳಗಾವಿ ಮಹಾನಗರ ಪಾಲಿಕೆಯು ಮನೆ ಮನೆಯಿಂದ ಸಂಗ್ರಹಿಸಿದ ಘನತ್ಯಾಜ್ಯ ಬೇರ್ಪಡಿಸುವ ಕಾರ್ಯವನ್ನು ಎಲ್ಲಾ ವಾರ್ಡಗಳಲ್ಲಿ ಪ್ರಾರಂಭಿಸಲಾಗಿದೆ.

ಮನೆ ಮನೆಯಿಂದ ಸಂಗ್ರಹಿಸಿದ ಘನತ್ಯಾಜ್ಯ ಸಂಗ್ರಹಿಸುವ ಸಂದರ್ಭದಲ್ಲಿ ಒಣ ಮತ್ತು ಹಸಿ ಕಸವನ್ನು ಸಾಧ್ಯವಾದ ಮಟ್ಟಿಗೆ ಮನೆಯಿಂದಲೇ ಬೇರ್ಪಡಿಸಿ ಕಾರ್ಮಿಕರು ಘಂಟಿ ಗಾಡಿ ಅಥವಾ ಆಟೋ ಟಿಪ್ಪರ್‌ರಲ್ಲಿ ಸಂಗ್ರಹಿಸಿ ಹಸಿ ಕಸವನ್ನು ನೇರವಾಗಿ ಕಸ ಸಾಗಾಣಿಕೆ ಬೃಹತ್ ವಾಹನಗಳಿಗೆ ಸ್ಥಳಾಂತರಿಸಿ ಹಾಗೂ ಒಣ ತ್ಯಾಜ್ಯವನ್ನು ಉಪಯುಕ್ತ ಹಾಗೂ ನಿರುಪಯುಕ್ತಗಳನ್ನಾಗಿ ಮಹಾನಗರ ಪಾಲಿಕೆ ಸ್ಥಾಪಿಸಿದ ಕೇಂದ್ರಗಳಲ್ಲಿ ಬೇರ್ಪಡಿಸಿದ ಉಪಯುಕ್ತವಾದುದನ್ನು ಮರುಬಳಿಕೆ ಮಾಡುವರಿಗೆ ನೀಡಿ ಆದಾಯ ಪಡೆಯುತ್ತಾರೆ. ಪ್ರತಿ ದಿನ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗುವ ಸುಮಾರು 250-260 ಟನ್ನಗಳ ಕಸವನ್ನು ಕಾಂಪ್ಯಾಕ್ಟರ್, ಟಿಪ್ಪರಗಳಲ್ಲಿ ಮೂಲಕ ಬೆಳಗಾವಿಯ ತ್ಯಾಜ್ಯ ಸಂಸ್ಕರಣಾ ಘಟಕ ಇರುವ ತುರಮುರಿ ಪ್ರದೇಶದಲ್ಲಿ ವಿಲೇವಾರಿಗಾಗಿ ಸಾಗಿಸಲಾಗುತ್ತಿದೆ.
ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪಾದನೆ ಆಗುವ ಘನತ್ಯಾಜ್ಯವನ್ನು ಮಹಾನಗರ ಪಾಲಿಕೆಯ ಅಧೀನಕೊಳ್ಳಪಟ್ಟ ರಿ.ಸ.ನಂ.19, 40/1/2 ಮತ್ತು 42 ರಲ್ಲಿಯ 66 ಎಕರೆ ಜಾಗದಲ್ಲಿ ಮೆ|| ರಾಮ್ಕಿ ಎನ್ವಿರೋ ಇಂಜಿನೀಯರ್ಸ್ ಹೈದರಾಬಾದ್ ಇವರಿಗೆ ದಿನಾಂಕ:- 28/07/2007 ರಂದು ಬಿ.ಓ.ಟಿ (Built operate and transfer) ಆಧಾರದ ಮೇಲೆ 20 ವರ್ಷಗಳಿಗೆ ಕಾರ್ಯನಿರ್ವಹಿಸಲು ವಹಿಸಲಾಗಿರುತ್ತದೆ. ಹಾಗೂ ಸಿ.ಓ.ಡಿ (Commercial operation date) ದಿನಾಂಕ:-27/07/2009 ರಂದು ನೀಡಲಾಗಿರುತ್ತದೆ.

ಸದರಿ ಘಟಕದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಅಂದರೆ, ವಾಚ್‌ಮನ್ ಶೆಡ್, ನೀರು ಹಾಗೂ ವಿದ್ಯುಚ್ಛಕ್ತಿ ಸೌಲಭ್ಯ, ವೇ-ಬ್ರಿಡ್ಜ್, ಸುತ್ತಲೂ ಗಿಡಮರಗಳನ್ನು ಬೆಳಸಲಾಗಿರುತ್ತದೆ. ಪ್ರತಿ ದಿನ ಉತ್ಪಾದನೆ ಆಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಕೊಳೆತ ಜೈವಿಕ (bio degradable) ತ್ಯಾಜ್ಯವನ್ನು 4000 ಚ.ಮಿ. ವಿಸ್ತೀರ್ಣದ windrow platform ದಲ್ಲಿ aerobic composting ತಂತ್ರಜ್ಞಾನವನ್ನು ಅಳವಡಿಸಿ ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತಿದೆ.
ಸದರಿ ಘನತ್ಯಾಜ್ಯವನ್ನು ಸಂಸ್ಕರಿಸಿದ ನಂತರ ಉಳಿಯುವ ಕೊಳೆಯಲಾರದ (Innert) ತ್ಯಾಜ್ಯವನ್ನು ನೆಲಭರ್ತಿ ಜಾಗದಲ್ಲಿ Leachate ನೀರು ಅಂತರ್ಜಲ ಸೇರದಂತೆ HDPE liner, Sand, Stone, and Perforated HDPE Piping ಹಾಕಿ ಸಂಗ್ರಹಿಸಿ Scientific Landfill ಮಾಡಲಾಗಿರುತ್ತದೆ ಹಾಗೂ ಉತ್ಪಾದನೆಯಾದ leachate ನೀರನ್ನು Leachate Treatment Plant ಮೂಲಕ ಸಂಸ್ಕರಣೆ ಮಾಡಲಾಗುತ್ತಿದೆ ಹಾಗೂ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ.

ಇದಲ್ಲದೇ ಈ ಕೆಳಗೆ ನಮೂದಿಸಿರುವಂತೆ ಕಸ ಸಂಸ್ಕರಣೆ ಮಾಡುವ ಕ್ರಮ ಕೈಗೊಳ್ಳಲಾಗಿರುತ್ತದೆ.

- 0.5 ಟಿಪಿಡಿ ಸಾಮರ್ಥ್ಯದ 3 ಬಯೋಗ್ಯಾಸ್ ಘಟಕಗಳನ್ನು ಪಾಲಿಕೆ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್, ಬಾಲಕಿಯರ ವಸತಿಗೃಹ ಹಾಗೂ ನಿರಾಶ್ರಿತರ ಕೇಂದ್ರದಲ್ಲಿ ನಿರ್ಮಿಸಿ, ಅವುಗಳಲ್ಲಿ ಉತ್ಪತ್ತಿಯಾಗುವ ಇಂಧನವನ್ನು ಆಯಾ ಕೇಂದ್ರಗಳಲ್ಲಿ ಉಪಯೋಗಿಸಲಾಗುತ್ತಿದೆ.
- 5 ಟಿಪಿಡಿ ಸಾಮರ್ಥ್ಯದ ಒಂದು ಬಯೋಗ್ಯಾಸ್ ಘಟಕಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಿಸುವ ಕಾಮಗಾರಿಯು ಪ್ರಗತಿ ಹಂತದಲ್ಲಿರುತ್ತದೆ.
- ಇ-ತ್ಯಾಜ್ಯ ಸಂಗ್ರಹಣೆಗೆ ಕ್ರಮಕೈಗೊಳ್ಳಲಾಗಿದೆ.
- ಸಿ & ಡಿ ತ್ಯಾಜ್ಯ ವಿಲೇವಾರಿಗೆ ಸ್ಥಳ ಅಧಿಸೂಚಿಸಲಾಗಿದೆ.
- ಖಾಸಬಾಗದಲ್ಲಿರುವ ಪಾರಂಪರಿಕ ತ್ಯಾಜ್ಯ ವಿಲೇವಾರಿಗೆ ರೂ.22.96 ಕೋಟಿಗಳನ್ನು ಡಿ.ಪಿ.ಆರ್.ನ್ನು ಸಿದ್ಧಪಡಿಸಿ ಎಚ್.ಪಿ.ಸಿ. ಅನುಮೋದನೆಗೆ ಸಲ್ಲಿಸಲಾಗಿದೆ.
- ವಾಣಿಜ್ಯ ಸ್ಥಳಗಳಲ್ಲಿ 24 ನಂ ವಿನೂತನ ಮಾಧರಿಯ 24 ಸೆನ್ಸರ್ ಒಳಗೊಂಡ ಭೂಗತ ಡಸ್ಟ್‌ಬಿನ್‌ಗಳನ್ನು ಅಳವಡಿಸಲಾಗಿದೆ.
- 100 ಕಿ.ಗ್ರಾಂ. ಪೀಟ್ ಮಾಸ್ ಡಿಕಂಪೋಸ್ಟಿಂಗ್ ಯೂನಿಟ್ ಖರೀಧಿಸಲಾಗಿರುತ್ತದೆ.
- ಒಣತ್ಯಾಜ್ಯ ನಿರ್ವಹಣೆ (RDF) ಕುರಿತು ಡಾಲ್ಮಿಯಾ & ಜೆ. ಕೆ. ಸಿಮೆಂಟ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಸದರಿ ಪ್ಲಾಸ್ಟಿಕ್/ಒಣ ತ್ಯಾಜ್ಯವನ್ನು ಸಿಮೆಂಟ್ ಕಾರ್ಖಾನೆಗೆ ನೀಡಲಾಗಿರುತ್ತದೆ. ಎಪ್ರಿಲ್-2022 ರಿಂದ ಜನೇವರಿ-2023 ವರೆಗೆ ಒಟ್ಟೂ 5369.58 **ಟನ್‌ಗಳಷ್ಟು** ಆರ್.ಡಿ.ಎಫ್. ನ್ನು ಕಳುಹಿಸಲಾಗಿರುತ್ತದೆ.
- ಹಸಿತ್ಯಾಜ್ಯವನ್ನು ಸಂಸ್ಕರಿಸಲು ವಿಕೇಂದ್ರಿಕೃತ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಬೆಳಗಾವಿಯ ಶ್ರೀಗರದಲ್ಲಿ ನಿರ್ಮಿಸಲಾಗಿರುತ್ತದೆ.

Tariq Pathan, IITAZ Ventures, Kumareashwanagar, Dharwad ಇವರಿಗೆ ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಚಿಕನ್ ಅಂಗಡಿಗಳಲ್ಲಿ ಉತ್ಪತಿಯಾಗುವ ದೈನಂದಿನ ಚಿಕನ್ ತ್ಯಾಜ್ಯವನ್ನು ಪಾಲಿಕೆಯಿಂದ ಯಾವುದೇ ರೀತಿಯ ಸಹಾಯವಿಲ್ಲದೇ ಉಚಿತವಾಗಿ ತೆಗೆದುಕೊಂಡು ಹೋಗಲು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿಯವರು ಈ ಸೇವೆಗೆ ಪಾಲಿಕೆಗೆ ರೂ.1.00 ಲಕ್ಷಗಳ ಸೇವಾಶುಲ್ಕವನ್ನು ಮುಂಚಿತವಾಗಿ ಭರಣಾ ಮಾಡಿರುತ್ತಾರೆ ಹಾಗೂ ಸಮರ್ಪಕವಾಗಿ ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಯನ್ನು ಮಾಡಿಕೊಂಡು ಬಂದಿರುತ್ತಾರೆ.

### 6. ವಿಜಯಪುರ ಮಹಾನಗರಪಾಲಿಕೆ

ವಿಜಯಪುರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 35 ವಾರ್ಡಗಳಿದ್ದು, ಎಲ್ಲಾ ವಾರ್ಡಗಳಲ್ಲಿ ಆಟೋ ಟಿಪ್ಪರಗಳ ಮುಖಾಂತರ ಮನೆ ಮನೆ ತ್ಯಾಜ್ಯವನ್ನು ಸಂಗ್ರಹಿಸಿ ಕಾಂಪ್ಯಾಕ್ಟರ್‌ಗಳ ಮುಖಾಂತರ, ನಗರದ ಹೊರವಲಯದಲ್ಲಿರುವ ಇಂಡಿರೋಡ, ಸರ್ವೇ ನಂ 138&139ರಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಸಾಗಿಸಿ ಸಂಸ್ಕರಿಸಲಾಗುತ್ತಿದೆ.

### 7. ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ

ನಗರದಲ್ಲಿ ಕಸ ನಿರ್ವಹಣೆಗಾಗಿ ಒಂದು ಸಮಗ್ರ ಯೋಜನೆಯನ್ನು ತಯಾರಿಸಿ ಅದರ DPR ಗೆ ಸರ್ಕಾರದಿಂದ ದಿ:26/04/2016 ರಂದು ಅನುಮೋದನೆ ಪಡೆಯಲಾಗಿದ್ದು, ಈ ಯೋಜನೆಯಂತೆ ಕಾರ್ಯ ಪ್ರಗತಿಯಲ್ಲಿದೆ.

* ಪಾಲಿಕೆಯು 216 ಆಟೋ-ಟಿಪ್ಪರ್‌ಗಳ ಮುಖಾಂತರ ಮನೆ-ಮನೆಗಳಿಂದ ಮೂಲದಲ್ಲಿಯೇ ಕಸವನ್ನು ಹಸಿಕಸ ಒಣಕಸವನ್ನಾಗಿ ಬೇರ್ಪಡಿಸಿ ಸಂಗ್ರಹಿಸಲಾಗುವುದು. ಆಟೋ-ಟಿಪ್ಪರ್‌ಗಳಿಗಾಗಿ ಪ್ರತಿ ವಾರ್ಡ್‌ಗಳಿಗೆ ಪ್ರತ್ಯೇಕ ಮೈಕ್ರೊಪ್ಲ್ಯಾನ್ ತಯಾರಿಸಿ ಅದರಂತೆ ರೂಟ್‌ಗಳಲ್ಲಿ ಪ್ರತಿದಿನ ಕಸ ಸಂಗ್ರಹಿಸಲಾಗುವುದು.

* ದೊಡ್ಡ ಪ್ರಮಾಣದ ತ್ಯಾಜ್ಯ ಹಾಗೂ ಸಂಗ್ರಹಣೆಗಾಗಿ ವಾಣಿಜ್ಯ ಪ್ರದೇಶ ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ವಿಶೇಷವಾಗಿ ಮೈಕ್ರೋಪ್ಲ್ಯಾನ್ ತಯಾರಿಸಿ ಮಧ್ಯಾಹ್ನದ ವೇಳೆ ಆಟೋ-ಟಿಪ್ಪರ್‌ಗಳನ್ನು ನಿಯೋಜಿಸಿ ಬೃಹತ್ ಪ್ರಮಾಣದ ಕಸ ವಿಲೇವಾರಿ ಮಾಡಲಾಗುತ್ತದೆ.

* ನಗರದಲ್ಲಿ ವಿವಿಧೆಡೆ 6 ಕಂಪ್ಯಾಕ್ಟರ್ ಸ್ಟೇಷನ್ ಸ್ಥಾಪಿಸಿ ಕಸವನ್ನು ಸಂಗ್ರಹಿಸಿ ಒಮ್ಮೆಗೆ ಗಾರ್ಬೇಜ್ ಯಾರ್ಡ್‌ಗೆ ಸಾಗಿಸಲಾಗುತ್ತಿದೆ.

* ಹುಬ್ಬಳ್ಳಿಯಲ್ಲಿ 300 ಹಾಗೂ ಧಾರವಾಡದಲ್ಲಿ 150 TPD ಸಾಮರ್ಥ್ಯದ ಕಾಂಪೋಸ್ಟ್ ಘಟಕಗಳನ್ನು ಸ್ಥಾಪಿಸಿದ್ದು, ಸಧ್ಯ ಎರಡೂ ಘಟಕಗಳಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಪಾಲಿಕೆಯಲ್ಲಿ SWM Rules-2016ನ್ನು ಯಥಾವತ್ತಾಗಿ ಅಳವಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

* ನಗರದಲ್ಲಿ 'ಮಾಸ್ ಕ್ಲೀನಿಂಗ್ ಡ್ರೈವ್' 'ಹೆಲ್ತ್ ಡೆ' ಮುಖಾಂತರ ಶೀಘ್ರ ಸ್ವಚ್ಛತೆಗೆ ಕ್ರಮ ವಹಿಸಲಾಗುತ್ತಿದೆ.

## 8. ಕಲಬುರಗಿ ಮಹಾನಗರಪಾಲಿಕೆ-

ಕಲಬುರಗಿ ಮಹಾನಗರ ಪಾಲಿಕೆಯ ಘನ ತ್ಯಾಜ್ಯ ವಸ್ತುಗಳ ಸಂಗ್ರಹಣೆ ಹಾಗು ಸಾಗಾಣಿಕೆಯನ್ನು ವೈಜ್ಞಾನಿಕ ರೀತಿಯಲ್ಲಿ ಸುವ್ಯವಸ್ಥಿತವಾಗಿ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ. ಮಹಾನಗರ ಪಾಲಿಕೆಯ ಎಲ್ಲಾ ವ್ಯಾಪ್ತಿಯಲ್ಲಿ 55 ವಾರ್ಡಗಳಲ್ಲಿ ಮನೆ-ಮನೆಗಳಿಂದ ಕಸ ಸಂಗ್ರಹಣೆ ಮಾಡಲಾಗುತ್ತಿದೆ. ಮನೆಗಳಲ್ಲಿ ಸಂಗ್ರಹಿಸುವ ಕಸವನ್ನು ಆದಷ್ಟು ಮೂಲದಲ್ಲಿಯೆ ಬೇರ್ಪಡಿಸಿ ಸಂಗ್ರಹಿಸಲು ಸೂಕ್ತ ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ಕಸವನ್ನು ಕಾಂಪ್ಯಾಕ್ಟರ್ ಮೂಲಕ ವಿಲೇವಾರಿ ಸ್ಥಳಕ್ಕೆ ಸಾಗಿಸಲಾಗುತ್ತಿದೆ.

ನಗರದಲ್ಲಿ ಒಟ್ಟು 11 ಒಣ ತ್ಯಾಜ್ಯ ಸಂಗ್ರಹಣೆ ಘಟಕಗಳನ್ನು ನಿರ್ಮಾಣ ಮಾಡಿಲಾಗಿದ್ದು ಸದರಿ ಘಟಕಗಳಿಂದ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇಮಾಡಲಾಗುತ್ತಿದೆ.

ನೆಲ ಭರ್ತಿ ಜಾಗದ ಹೆಸರು : ಉದನೂರ ಗ್ರಾಮದ ಸರ್ವೆನಂ 82. ಸರ್ಕಾರಿ ಜಮೀನು, ವಿಸ್ತೀರ್ಣ 28 ಎಕರೆ 19 ಗುಂಟೆ. ಪಾಲಿಕೆಯಲ್ಲಿ ಪ್ರತಿ ದಿನ ಉತ್ಪತ್ತಿಯಾಗುತ್ತಿರುವ ಸುಮಾರು 243 ಟನ್ ಘನ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಸ್ವಚ್ಛ ಭಾರತ ಮಿಷನ್ ಅಡಿ ಅಗತ್ಯ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸಲಾಗುತ್ತಿದೆ. ಪ್ರಸ್ತುತ ಸಂಪರ್ಕ ರಸ್ತೆ ನಿರ್ಮಾಣ, ಕಾಂಪೌಂಡ್ ಗೋಡೆ ನಿರ್ಮಾಣ, ವಾಚ್ ಮ್ಯನ್ ಶೆಡ್, ಅಂತರಿಕ ರಸ್ತೆಗಳು, ನೀರು ಹಾಗೂ ವಿದ್ಯುತ್‌ಚ್ಛಕ್ತಿ ಸೌಲಭ್ಯ, ವೇ-ಬ್ರಿಡ್ಜ್, 04 ಸಗ್ರಿಗೇಷನ್ ಮಷೀನ್ ಹಾಗೂ ಸುತ್ತಲೂ ಗಿಡಮರಗಳನ್ನು ಬೆಳಸಲಾಗಿರುತ್ತದೆ.

3 ಲಕ್ಷ ಟನ್ ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ 18.21 ಕೋಟಿಗಳ ನಿರ್ವಹಣಾ ವೆಚ್ಚದ ವಿಸ್ತೃತ ಯೋಜನಾವರದಿಯನ್ನು ಸಿದ್ದಪಡಿಸಿದ್ದು, ಸರ್ಕಾರದ ಉನ್ನತಾಧಿಕಾರಿಗಳ ಸಮಿತಿ ಅನುಮೊದನೆ ಹಂತದಲ್ಲಿರುತ್ತದೆ. ಅನುಮೋದನೆ ಪಡಿದು ಕೆ.ಟಿ.ಪಿ.ಪಿ ನಿಯಮಗಳ ರೀತ್ಯಾ ಟೆಂಡರ್ ಕರೆದು ಕೆಲಸ ನಿರ್ವಹಿಸಲಾಗುವುದು.

## 9. ಶಿವಮೊಗ್ಗ ಮಹಾನಗರಪಾಲಿಕೆ

ಶಿವಮೊಗ್ಗ ಮಹಾನಗರಪಾಲಿಕೆಯಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಮನೆ-ಮನೆಗಳಿಂದ ಸಂಗ್ರಹಿಸಲು ವಾಹನಗಳನ್ನು ನಿಯೋಜಿಸಲಾಗಿರುತ್ತದೆ ಹಾಗೂ ಈ ತ್ಯಾಜ್ಯವನ್ನು ದ್ವಿತೀಯ ಹಂತದ ವಾಹನಗಳ ಮೂಲಕ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಾಗಿಸಲಾಗುತ್ತಿರುತ್ತದೆ ಹಾಗೂ ದೈನಂದಿನ ತ್ಯಾಜ್ಯವನ್ನು ಅಂದೇ ಸಂಸ್ಕರಿಸಲು ಕ್ರಮವಹಿಸಲಾಗುತ್ತಿರುತ್ತದೆ.

**10. ಬಳ್ಳಾರಿ ಮಹಾನಗರಪಾಲಿಕೆ**

ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಪ್ರತಿದಿನ ಸುಮಾರು 180 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, 165 ಟನ್ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಣೆ ಮಾಡಲಾಗುತ್ತದೆ. ಸುಮಾರು 105 ಟನ್ ಹಸಿಕಸ ನಗರದಲ್ಲಿ ಉತ್ಪತ್ತಿಯಾಗುತ್ತದೆ. ಸುಮಾರು 60 ಟನ್ ಒಣಕಸ ಉತ್ಪತ್ತಿಯಾಗುತ್ತಿದ್ದು, ಸುಮಾರು 15 ಟನ್ ಬೀದಿ ಗುಡಿಸಿದ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು,39 ವಾರ್ಡಗಳಲ್ಲಿನ ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ಮನೆ-ಮನೆ ತ್ಯಾಜ್ಯವನ್ನು ಸಂಗ್ರಹಿಸಲು ಪಾಲಿಕೆಯಲ್ಲಿ ಒಟ್ಟು 340 ಹೊರಗುತ್ತಿಗೆ ಪೌರಕಾರ್ಮಿಕರು ಹಾಗೂ 217 ಖಾಯಂ ಪೌರಕಾರ್ಮಿಕರು, 135 ವಾಹನ ಚಾಲಕರು ಮತ್ತು ಕ್ಲೀನರ ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ಪೌರಕಾರ್ಮಿಕರು ಮನೆ-ಮನೆ ತ್ಯಾಜ್ಯ ಸಂಗ್ರಹಣೆಗಾಗಿ 4 ಚಕ್ರದ ವಾಹನಗಳು ಒಟ್ಟು ಸಂಖ್ಯೆ 58, 3 ಚಕ್ರದ ವಾಹನಗಳು ಒಟ್ಟು 15, ಟ್ರಾಕ್ಟರ್ ಗಳು 21, ಬೀದಿಗುಡಿಸುವ ಕಾರ್ಯಕ್ಕಾಗಿ ಟ್ರಾಕ್ಟರ್ ಗಳು 7, ಲಾರಿ ಟಿಪ್ಪರ್ ಗಳು 12, ಇತರೆ ಮಷಿನರಿಗಳು ಜೆಸಿಬಿ 5, ಕಾಂಪ್ಯಾಕ್ಟರ್ 06, ಮಿನಿ ಎಕ್ಸಕವೇಟರ್ 01, ಸಾಲಿಡ್ ವೆಸ್ಟ್ ಸಕ್ಕಿಂಗ್ ಯಂತ್ರಗಳು 02, ಸದರಿ ವಾಹನಗಳನ್ನು ಘನತ್ಯಾಜ್ಯ ನಿರ್ವಹಣೆಗಾಗಿ ಬಳಸಲಾಗುತ್ತಿದೆ. ಇವುಗಳಿಂದ ಪ್ರತಿದಿನ ತ್ಯಾಜ್ಯವನ್ನು ಸಂಗ್ರಹಿಸಿ ನಗರದ ಹೊರವಲಯದಲ್ಲಿರುವ ಹರಗಿನಡೋಣಿ ಗ್ರಾಮದ ಸರ್ವೆ ನಂ.158ರಲ್ಲಿ ಇರುವ ಒಟ್ಟು 84 ಎಕೆರೆ 33 ಸೆಂಟ್ಸನ ನೆಲಭರ್ತಿ ಜಾಗದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಪ್ರತಿದಿನ ಬೀದಿಗುಡಿಸುವ ಮತ್ತು ಚರಂಡಿ ಸ್ವಚ್ಛಗೊಳಿಸುವ ಕೆಲಸಕ್ಕೆ ನಗರದ ರಸ್ತೆಗಳ ವಿವಿಧ (A,B,C)ಗಳಿಗನುಗುಣವಾಗಿ ಪೌರಕಾರ್ಮಿಕರನ್ನು ನಿಯೋಜಿಸಿ ಸೂಕ್ಷ್ಮ ಯೋಜನೆಯಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿದಿನ ಸುಮಾರು 15 ರಿಂದ 20ಟನ್ ಹಸಿ ತ್ಯಾಜ್ಯವನ್ನು ಸಂಗ್ರಹಿಸಿ ನೆಲಭರ್ತಿ ಸ್ಥಳದಲ್ಲಿ ಎರೋಬಿಕ್ ಕಾಂಪೋಸ್ಟಿಂಗ್ ಗಾಗಿ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದೆ. ಆಧುನಿಕ ಸಲಕರಣೆಗಳನ್ನು ನೀಡಿ ಪೌರಕಾರ್ಮಿಕರು ತ್ಯಾಜ್ಯವನ್ನು ನೇರವಾಗಿ ಮುಟ್ಟದ ರೀತಿಯಲ್ಲಿ ಸ್ವಚ್ಛಗೊಳಿಸಲು ತರಬೇತಿ ನೀಡಲಾಗಿದೆ. ಕಳೆದ 18 ತಿಂಗಳುಗಳ ಅವಧಿಯಲ್ಲಿ 150ಕ್ಕೂ ಹೆಚ್ಚು ಬ್ಲಾಕ್ ಸ್ಪಾಟ್ ಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಲಾಗಿದೆ. ಸದರಿ ಯೋಜನೆಯಡಿ ಸರ್ಕಾರದಿಂದ PFMS ಮೂಲಕ ಬಿಡುಗಡೆಯಾದ ಅನುದಾನದಲ್ಲಿ ವಿವಿಧ ವಾಹನ ಮತ್ತು ಯಂತ್ರೋಪಕರಣ ಖರೀದಿಸಲು ಅಂದಾಜು ಪತ್ರಿಕೆ ತಯಾರಿಸಿ ಆಡಳಿತಾಧಿಕಾರಿಗಳಿಂದ ಅನುಮೋದನೆ ಪಡೆದುಕೊಂಡು GEM/ಇ-ಟೆಂಡರ್ ಮೂಲಕ ಗುತ್ತಿಗೆದಾರರು ಆಯ್ಕೆ ಮಾಡಿ ಕಾರ್ಯದೇಶ ನೀಡಲಾಗಿರುತ್ತದೆ.

ಅನುಬಂಧ-೨

| SL. No. | ULB Name | Type | Allocation (as per action plan in Crores) | | | | | | | Total cost approved(in Crores) |
|---|---|---|---|---|---|---|---|---|---|---|
| | | | Dumpsite Remediation | Wet waste | Dry waste processing | SLF | C&D Processing | Transfer station | Mechanical sweeping | |
| 1 | Davanagere | CC | 12.71 | 0 | 8.245 | 1.369 | 2.76 | 0 | 1.1 | 26.184 |
| 2 | HDMC | CC | 26.4 | | 17.85 | 2.565 | 6 | | 0.55 | 53.365 |
| 3 | Belgaum CC | CC | 16.5 | | 9.265 | 0.782 | | | | 26.547 |
| 4 | Mysuru | CC | 16.94 | | 17.34 | 1.724 | 5.88 | | 0.55 | 42.434 |
| 5 | Tumkur | CC | 4.9 | | 5.695 | 1.056 | | | | 11.651 |
| 6 | Mangaluru City Corporation | CC | 49.5 | | 9.265 | 0.435 | | | | 59.2 |
| 7 | Ballari | CC | 21.56 | | 7.735 | 1.037 | | | | 30.332 |
| 8 | Vijayapura/ Bijapur | CC | 4.4 | | 6.205 | 1.134 | | | | 11.739 |
| 9 | Shivamoga | CC | 1.1 | | 6.12 | 0.445 | | | | 7.665 |
| 10 | Kalaburagi | CC | 17.22 | | 10.285 | 1.253 | 3.48 | 6.19 | 0.55 | 38.978 |
| | | | **171.23** | **0** | **98.005** | **11.8** | **18.12** | **6.19** | **2.75** | **308.095** |

Bhanunath
AEE, DMA